# ಧನ್ಯನಾದೆ ನಾನೀ ಜಗದೊಳು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 293.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the book of Prof. S.K. Ramachandra Rao and also in the books of Gorebala Hanumantha Rayaru.
3. **Note:** Singer has followed these lyrics with minor variations.

ರಾಗ: ರೇಗುಪ್ತಿ                    ತಾಳ: ಆದಿ

ಧನ್ಯನಾದೆ ನಾನೀ ಜಗದೊಳು, ಧನ್ಯನಾದೆ ನಾ     || ಪ ||
ಪನ್ನಗಶಯನನ ಕಣ್ಣಿನಿಂದಲಿ ಕಂಡು, ಧನ್ಯನಾದೆ ನಾ     || ಅಪ ||

ಉನ್ನತ ಮಹಿಮ ಪಾವನ್ನ ಚರಿತ ಸುರ
ಸನ್ನುತ ಚರಣನ
ಪನ್ನಗಾರಿ ವಾಹನ್ನ ಪುರುಷ ರನ್ನ
ಚೆನ್ನಿಗ ಶ್ರೀರಂಗನ್ನ ಮಹಿಮೆಯ ಕಂಡು     || ೧ ||

ದೇವ ದೇವೋತ್ತಮ ಕಾವ ನಮ್ಮ ಈಗ
ಭಾವಜನಯ್ಯನು
ಕಾವೇರಿ ತೀರದ ಉತ್ತಮ ಕ್ಷೇತ್ರದೊಳು
ಪಾವನ ನರಸಿಂಗನ ಕಂಡು     || ೨ ||

ಭಾನುಕೋಟಿ ಪ್ರಭ ಸ್ವಾನಂದ ಪೂರ್ಣನ
ದೀನ ರಕ್ಷಕನ
ಸಿರಿ ಪುರಂದರ ವಿಠಲ ಚೆನ್ನಿಗ
ಶ್ರೀರಂಗನ ಮಹಿಮೆಯ ಕಂಡು     || ೩ ||

**Classification:** Keerthane
**Ankita:** siri purandara vittala

**Location:** NA
**Category:** Jeevanoddhara
**Sub-Category:** dhanya, loka, kannu, Vishnu, sura, srirangam, ranga, deva, kaveri, Narasimha, surya, purna,
**Pravachana:** NA
**Explanation:** NA